ಕಚೇರಿಗೆ ಹತ್ತಿರದಲ್ಲಿ ವಾಸವಿದ್ದರೆ ಸಮಯ, ಹಣ ಉಳಿಯುತ್ತದೆ ಎಂಬ ಲೆಕ್ಕಾಚಾರದಲ್ಲಿ ಹುಡುಗ ರವಿವಾರವಿಡೀ ರೂಮು ಹುಡುಕುವ ಕಾರ್ಯದಲ್ಲಿ ನಿರತನಾದ. ಹದಿನೆಂಟನೇ ಕ್ರಾಸಿನಲ್ಲಿ ಪುರುಷರ ಪಿಜಿ ವಸತಿಗೃಹ ಕಾಣಿಸಿತು. ತುಸು ಅಳುಕಿನಿಂದಲೇ ಕಟ್ಟಡ ಪ್ರವೇಶಿಸಿ ಅಲ್ಲಿದ್ದ ಮ್ಯಾನೇಜರನ್ನು ಭೇಟಿಯಾದ.

'ರೂಮು ಬೇಕಿತ್ತು... ಖಾಲಿ ಉಂಟಾ?'

'ಹೌದು, ಇದೆ'.

'ಇಲ್ಲಿ ಎಲ್ಲರಿಗೂ ಅವಕಾಶ ಉಂಟಾ...?'

'ಹೌದು, ಎಲ್ಲರಿಗೂ ಅವಕಾಶವಿದೆ. ನಾವೆಲ್ಲಾ ಒಂದೇ ಅಲ್ಲವೇ...?' ಅಚ್ಚರಿಯ ಉತ್ತರ ದೊರಕಿತು. ಎಂತಹ ಉದಾತ್ತ ಮನಸ್ಸು!

ಅಡುಗೆಯವ ಖಾಲಿಯಿರುವ ಕೊಠಡಿ ತೋರಿಸಲು ಮೊದಲ ಮಹಡಿಗೆ ಕರೆದುಕೊಂಡು ಹೋಗುವಾಗ ಹುಡುಗನಿಗೆ ಆರಂಭದಲ್ಲಿ ಮ್ಯಾನೇಜರು ನೀಡಿದ ಆಶ್ವಾಸನೆ ಬಗ್ಗೆ ಏಕೋ ನಂಬಿಕೆ ಸಾಲದಾಗಿ, 'ಇಲ್ಲಿ ಎಲ್ಲರಿಗೂ ಅವಕಾಶ ಉಂಟಲ್ಲವೇ...?' ಎಂದು ಮತ್ತೊಮ್ಮೆ ವಿಚಾರಿಸಿದ.

'ಎಲ್ಲರನ್ನೂ ಹೇಗೆ ಸೇರಿಸಿಕೊಳ್ಳಲಾಗುತ್ತದೆ... ನೀವು ಯಾವ ಪೈಕಿ?' ಮೂಲ ಪ್ರಶ್ನೆ ಎದುರಾಯಿತು.

'ನಾನು... ಮುಸ್ಲಿಂ', ಹುಡುಗನ ದನಿಯಲ್ಲಿ ನಿರ್ಮಲತೆ ಇತ್ತು.

'ಅರೆ ಮೊದಲೇ ಏಕೆ ಹೇಳಲಿಲ್ಲ... ನಿಮಗೆ ರೂಮು ಕೊಡುವುದಿಲ್ಲ', ಅಡುಗೆಯವನ ಅಸಹನೆ, ಚಡಪಡಿಕೆ.

'ಕೆಳಗೆ ಮ್ಯಾನೇಜರು ಎಲ್ಲರಿಗೂ ಉಂಟು ಎಂದು ಹೇಳಿದರಲ್ಲ...'.

'ಎಲ್ಲರಿಗೂ ಅಂದರೆ ಎಲ್ಲರಿಗೂ ಅಲ್ಲ... ನಮ್ಮ ಸಮುದಾಯದ ಎಲ್ಲಾ ಉಪಪಂಗಡಗಳಿಗೆ ಎಂದು ಅರ್ಥ. ಅವನಿಗೆ ಬುದ್ಧಿ ಇಲ್ಲ, ಸರಿಯಾಗಿ ಹೇಳಿಲ್ಲ' ಎಂದು ಮ್ಯಾನೇಜರನನ್ನು ಯದ್ವಾತದ್ವಾ ಬೈಯಲು ತೊಡಗಿದಾಗ ಹುಡುಗನಲ್ಲಿ ನಡುಕ ಹುಟ್ಟಿತು. ಹೊರಗಿನ ಗೇಟನ್ನು ಎಷ್ಟು ಬೇಗ ದಾಟಿ ಬಚಾವಾದೇನೋ ಎಂಬ ಭಯದಲ್ಲಿ ದೌಡಾಯಿಸಿದ. ನೋಡಲು ಮೇಲ್ಜಾತಿಯ ವಟುವಂತೆ ಕಾಣಿಸುವ ತನ್ನನ್ನು ಮ್ಯಾನೇಜರು ತಮ್ಮವ ಎಂದು ಭಾವಿಸಿ, 'ನಾವೆಲ್ಲಾ ಒಂದೇ' ಎಂಬ ದೊಡ್ಡತನ ಸಾರಿದ್ದು ಹುಡುಗನ ಅರಿವಿಗೆ ಬಂದಾಗ, ಅವನಲ್ಲಿ ಹುಟ್ಟಿರಬಹುದಾದ ತಲ್ಲಣವನ್ನು ಅನುಭವಿಸದವರು ಅಂದಾಜಿಸಲು ಸಾಧ್ಯವೇ?

ಕೋವಿಡ್ ಸಾಂಕ್ರಾಮಿಕ ರೋಗ ಹುಡುಗನನ್ನು ರಾತ್ರೋರಾತ್ರಿ ಊರುಕಡೆ ಮುಖ ತಿರುಗಿಸುವಂತೆ ಮಾಡಿತ್ತು. ಹಲವು ತಿಂಗಳುಗಳ ಕಾಲ ಊರಲ್ಲೇ ವಾಸ, ಮಂಗಳೂರಿಗೆ ಓಡಾಟ. ಮನೆಯ ಅಟ್ಟದ ಮೇಲೆ ಅಪ್ಪ ಒಟ್ಟಿದ ಪುಸ್ತಕಗಳನ್ನು ಓದುತ್ತಾ, ಕವಿತೆ ಜೊತೆಗೆ ಕಾಲಕಳೆಯುತ್ತಾ ಹಾಯಾಗಿರಬೇಕಿದ್ದ ಹುಡುಗನನ್ನು ಬೆಂಗಳೂರಿನ ದಿನಪತ್ರಿಕೆಯೊಂದು ಮತ್ತೆ ಕರೆಯಿತು. ಕೆಲವು ವರ್ಷಗಳಷ್ಟೇ, ದಾರಿತಪ್ಪಿ ಬಂದ ರಂಗದಲ್ಲಿ ಕೆಲಸ ಮಾಡಿದ್ದು. ಕೊನೆಗೂ ಸೃಜನಶೀಲ ಕ್ಷೇತ್ರವೊಂದರಲ್ಲಿ ಅವಕಾಶದ ಬಾಗಿಲು ತೆರೆದುಕೊಂಡಿತು. ಪತ್ರಿಕೆಯಲ್ಲಿನ ಕಾಯಂ ನೌಕರಿ ತೊರೆದು ಹೊಸ ಹಾದಿ ಹಿಡಿಯಲು ನಿರ್ಧರಿಸಿದಾಗ ಸಂ ಅವರಿಗೊಂದು ಕರೆ:

'ಸರ್, ಆ ಪತ್ರಿಕೆಯ ಕೆಲಸಕ್ಕೆ ರಾಜಿನಾಮೆ ಕೊಟ್ಟೆ'.

'ಅರೆ, ಏನಾದರೂ ತೊಂದರೆ ಆಯ್ತೇ... ಸಹಾಯ ಬೇಕೇ...?'

'ಏನೂ ತೊಂದರೆ ಇಲ್ಲ. ನಾನೇ ನೌಕರಿ ತೊರೆದೆ. ನನ್ನ ಆಸಕ್ತಿಯ ಬೇರೆ ಕೆಲಸ ಸಿಕ್ಕಿದೆ'

ಸಂ ಸಮಾಧಾನ ಪಟ್ಟುಕೊಳ್ಳಲು ಸಾಕಷ್ಟು ಕಾರಣಗಳು ಕಾಣಿಸಿದವು. ಮೊದಲನೆಯದಾಗಿ, ಉಪಸಂ ಕೊನೆಗೂ ಸರಿಯಾದ ಹಾದಿಗೆ ಮರಳಿದ ಎಂಬ ಸಮಾಧಾನ. ಎರಡನೆಯದಾಗಿ, ಮೂರು ದಶಕಗಳ ಹಿಂದೆ ತಾನು ತುಳಿದಿದ್ದು ಇಂತಹದೇ ಸ್ವತಂತ್ರ ಹಾದಿ. ಎರಡೂ ಸೇರಿ ಸಂ ನೆಮ್ಮದಿ ಇಮ್ಮಡಿಸಲು ಶಪಥಗೈದಂತೆ ಎದೆಯಲ್ಲಿ ಒಂದೇ ಸಮನೆ ಧುಮ್ಮಿಕ್ಕಿದವು.

'ಹೊಸ ಸಾಹಸ ಆರಂಭಿಸುವ ಮೊದಲು ಮನೆಗೆ ಬಂದುಹೋಗು' ಎಂದು ಹೇಳಿ ಸಂ ಸುಮ್ಮನಾದ.

* * *

ಯಾವುದೋ ಒಂದು ದಿನ. ಉಪಸಂ ಕರೆ ಮಾಡಿ ಬೆಂಗಳೂರಿಗೆ ಬಂದಿರುವುದಾಗಿ ತಿಳಿಸಿದ. ಗೂಗಲ್ ನಕಾಶೆ ಅನುಸರಿಸಿ ಮನೆಗೆ ಬಂದಿಳಿದ. ಆತ ಬಂದಾಗ ಸಂ ಎದುರಿಗಿನ ಕುರ್ಚಿಯಲ್ಲಿ ಮತ್ತೊಬ್ಬ ವ್ಯಕ್ತಿ ಕುಳಿತಿದ್ದರು. ಸಂ ತಲೆಯೊಳಗೆ ನುಸುಳಲು ಸಾಧ್ಯವೇ ಇಲ್ಲದ ವ್ಯಾವಹಾರಿಕ ಯೋಜನೆಯೊಂದನ್ನು